# ಕೃಷಿ ವಿಶ್ವವಿದ್ಯಾನಿಲಯ

ಹಣಕಾಸು ನಿಯಂತ್ರಣಾಧಿಕಾರಿಗಳ ಕಛೇರಿ, ಜಿ.ಕೆ.ವಿ.ಕೆ, ಬೆಂಗಳೂರು–560 065

---

ಸಂಖ್ಯೆ: ಹ.ನಿ.ಕ/ವಿ–4/ಎನ್.ಡಿ.ಸಿ/2023–2024 ದಿನಾಂಕ: 19.07.2023

**ಟಿಪ್ಪಣಿ:**

ವಿಷಯ: ಸವಿವರ ಸಾದಿಲ್ವಾರು (ಎನ್.ಡಿ.ಸಿ) ಬಿಲ್ಲುಗಳನ್ನು ಸಲ್ಲಿಸುವ ಬಗ್ಗೆ

ಉಲ್ಲೇಖ: 1. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ. ಆಇ 26 ಬಿಪಿಎ 2021 (543927) ದಿನಾಂಕ: 16.08.2021

2. ಕರ್ನಾಟಕ ಸರ್ಕಾರದ ನೆನಪೋಲೆ–1 ಸಂಖ್ಯೆ. ಅಗ್ರಿ 49 ಐಎಫ್ಎ 2021 ದಿನಾಂಕ: 23.06.2023

3. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ. ಆಇ 24 ಟಿಎಆರ್ 2023 ದಿನಾಂಕ: 04.07.2023

--

ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 36 ಮತ್ತು 37ರ ಅನ್ವಯ ಸಂಕ್ಷಿಪ್ತ ಸಾದಿಲ್ವಾರು (ಎ.ಸಿ) ಬಿಲ್ಲುಗಳ ಮೇಲೆ ಸೆಳೆಯಲಾದ ಮೊತ್ತಗಳಿಗೆ ಸವಿವರ ಸಾದಿಲ್ವಾರು (ಎನ್.ಡಿ.ಸಿ) ಬಿಲ್ಲುಗಳನ್ನು ಒಂದು ತಿಂಗಳೊಳಗಾಗಿ ಸಲ್ಲಿಸಬೇಕೆಂದು ತಿಳಿಸಲಾಗಿದೆ. ಈ ನಿಯಮಗಳನ್ನು ಪಾಲಿಸದೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದೆ ಇರುವುದರಿಂದ ಬಿಲ್ಲುಗಳು ಇತ್ಯರ್ಥವಾಗದೆ ಬಾಕಿ ಉಳಿಸಿಕೊಂಡಿರುವುದಾಗಿ ಲೆಕ್ಕ ಪರಿಶೋಧಕರು ಹಾಗೂ ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ. ಆದ್ದರಿಂದ, ಕೂಡಲೇ ಬಾಕಿ ಉಳಿಸಿಕೊಂಡಿರುವ ಎ.ಸಿ. ಬಿಲ್ಲುಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು ದಿನಾಂಕ **31.07.2023**ರ ಒಳಗೆ ಸಲ್ಲಿಸಲು ಸೂಚಿಸಲಾಗಿದೆ. ಇಂತಹ ಪ್ರಸಂಗಗಳಲ್ಲಿ ಬಟವಾಡೆ ಅಧಿಕಾರಿಗಳೇ ನೇರ ಹೊಣೆಗಾರರಾಗಿರುತ್ತಾರೆಂದು ಈ ಮೂಲಕ ಮತ್ತೊಮ್ಮೆ ಸೂಚಿಸಲಾಗಿದೆ (ಕರ್ನಾಟಕ ಸರ್ಕಾರದ ಸುತ್ತೋಲೆ ಲಗತ್ತಿಸಲಾಗಿದೆ). ಮುಂದಿನ ದಿನಗಳಲ್ಲಿ ಸೆಳೆಯುವ ಎ.ಸಿ ಬಿಲ್ಲುಗಳನ್ನು ಒಂದು ತಿಂಗಳೊಳಗಾಗಿ ಎನ್.ಡಿ.ಸಿ ಬಿಲ್ಲುಗಳನ್ನು ತಪ್ಪದೇ ಸಲ್ಲಿಸಲು ನಿರ್ದೇಶಿಸಲಾಗಿದೆ.

ಹಣಕಾಸು ನಿಯಂತ್ರಣಾಧಿಕಾರಿಗಳು

ಪ್ರತಿಯನ್ನು:

1. ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳಿಗೆ
2. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಛೇರಿ, ಕೃ.ವಿ.ವಿ., ಬೆಂಗಳೂರು.
3. ಕಛೇರಿ ಕಡತ

on 2/09/21

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 26 ಬಿಪಿಎ 2021 (543927)

ಕರ್ನಾಟಕ ಸರ್ಕಾರದ ಸಚಿವಾಲಯ

ವಿಧಾನಸೌಧ,

ಬೆಂಗಳೂರು, ದಿನಾಂಕ:16.08.2021

ಸುತ್ತೋಲೆ

**ವಿಷಯ:** ಇಲಾಖೆ ಜಮೆ ಮತ್ತು ವೆಚ್ಚದ ಲೆಕ್ಕ ಹೊಂದಾಣಿಕೆ, ಎ.ಸಿ. ಬಿಲ್ಲುಗಳ ಮೇಲೆ ಎನ್.ಡಿ.ಸಿ. ಬಿಲ್ಲುಗಳ ಸಲ್ಲಿಸುವಿಕೆ, ನಿಷ್ಕ್ರಿಯ ಪಿ.ಡಿ. ಖಾತೆಗಳ ಮುಕ್ತಾಯ ಹಾಗೂ ಉಪಯೋಗತಾ ಪ್ರಮಾಣ ಪತ್ರ ಸಲ್ಲಿಸುವಿಕೆಯ ಬಗ್ಗೆ.

******

ಮಹಾಲೇಖಪಾಲರು ಪ್ರತಿ ವರ್ಷ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ವರದಿಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಪ್ರಸ್ತಾಪಿಸುವುದರಿಂದ ಈ ಬಗ್ಗೆ ಕೆಳಕಂಡ ಸೂಚನೆಗಳನ್ನು ಪಾಲಿಸಲು ಕೋರಲಾಗಿದೆ.

**ಲೆಕ್ಕ ಹೊಂದಾಣಿಕೆ:-**

ಕರ್ನಾಟಕ ಬಜೆಟ್ ಕೈಪಿಡಿಯ ಪ್ಯಾರಾ 251ರಲ್ಲಿ ಲೆಕ್ಕ ಹೊಂದಾಣಿಕೆ ಕಾರ್ಯವನ್ನು ಹಣಕಾಸು ವರ್ಷದ ಕೊನೆಯವರೆಗೂ ಮುಂದೂಡದೆ, ಲೆಕ್ಕಗಳು ಮುಕ್ತಾಯವಾದ ನಂತರ ಲೆಕ್ಕಗಳಲ್ಲಿನ ತಪ್ಪು ವರ್ಗೀಕರಣಗಳನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ, ಹೊಂದಾಣಿಕೆ ಕಾರ್ಯವನ್ನು ನಿಯಮಿತವಾಗಿ ಮಾಡಬೇಕೆಂದು ತಿಳಿಸಲಾಗಿದೆ. ಮಹಾಲೇಖಪಾಲರು 2020-21 ನೇ ಸಾಲಿಗೆ 99.92% ಸ್ವೀಕೃತಿಗಳು ಹಾಗೂ 97.78% ವೆಚ್ಚಗಳಿಗೆ ಲೆಕ್ಕ ಹೊಂದಾಣಿಕೆ ಮಾಡಲಾಗಿರುವುದಾಗಿ ಶ್ಲಾಘಿಸಿರುತ್ತಾರೆ. ಇನ್ನು ಮುಂದೆಯೂ ಹೀಗೆಯೇ ತಮ್ಮ ವ್ಯಾಪ್ತಿಯಡಿ ಬರುವ ಎಲ್ಲಾ ನಿಯಂತ್ರಣಾಧಿಕಾರಿಗಳಿಗೆ ನಿಯಮಿತವಾಗಿ ಜಮೆ ಮತ್ತು ಖರ್ಚುಗಳ ಲೆಕ್ಕ ಹೊಂದಾಣಿಕೆಯನ್ನು ಮಾಡುವ ಬಗ್ಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುವಂತೆ ಕೋರಲಾಗಿದೆ.

DC (S-III)
DC (S-VIII)
DC (S-IV)

**ಸವಿವರ ಸಾದಿಲ್ವಾರು ಬಿಲ್ಲುಗಳು:-**

ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 36ರ ಅನ್ವಯ ಸಂಕ್ಷಿಪ್ತ ಸಾದಿಲ್ವಾರು ಬಿಲ್ಲುಗಳ ಮೇಲೆ ಸೆಳೆಯಲಾದ ಮೊತ್ತಗಳಿಗೆ ಸವಿವರ ಸಾದಿಲ್ವಾರು ಬಿಲ್ಲುಗಳನ್ನು (ಎನ್.ಡಿ.ಸಿ) ಒಂದು ತಿಂಗಳೊಳಗಾಗಿ ಸಲ್ಲಿಸಬೇಕೆಂದು ತಿಳಿಸಲಾಗಿದೆ. ಈ ನಿಯಮಗಳನ್ನು ಪಾಲಿಸದೆ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸದೆ ಇರುವುದರಿಂದ ದಿನಾಂಕ:31/03/2021ಕ್ಕೆ ರೂ.126.34 ಕೋಟಿಗಳ 2221 ಬಿಲ್ಲುಗಳು ಇತ್ಯರ್ಥವಾಗದೆ ವಿವಿಧ ಇಲಾಖೆಗಳು ಬಾಕಿ ಉಳಿಸಿಕೊಂಡಿರುವುದಾಗಿ ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ. ಆದ್ದರಿಂದ ಕೂಡಲೇ ಬಾಕಿ ಉಳಿಸಿಕೊಂಡಿರುವ ಎ.ಸಿ. ಬಿಲ್ಲುಗಳಿಗೆ ಎನ್.ಡಿ.ಸಿ. ಬಿಲ್ಲುಗಳನ್ನು ಸಲ್ಲಿಸಲು ತಮ್ಮ ವ್ಯಾಪ್ತಿಯಡಿ ಬರುವ ಹಣ ಸೆಳೆಯುವ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುವಂತೆ ಕೋರಲಾಗಿದೆ.

ಪಿ.ಡಿ. ಖಾತೆ:-

ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 286 ರನ್ವಯ, ಸರ್ಕಾರದ ಅನುಮತಿ ಮೇರೆಗೆ ತೆರೆಯಲಾಗಿರುವ ಪಿ.ಡಿ. ಖಾತೆಗಳನ್ನು ಒಂದು ವೇಳೆ ಮುಂದಿನ ಸಾಲಿನಲ್ಲಿ ಮುಂದುವರೆಸಬೇಕಾದಲ್ಲಿ, ಇದಕ್ಕೆ ಆರ್ಥಿಕ ಇಲಾಖೆಯ ಅನುಮತಿ ಪಡೆಯಬೇಕಿರುತ್ತದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರು ದಿ:31/03/2021 ಕ್ಕೆ ರೂ.3,989.22 ಕೋಟಿ ನಿಷ್ಕ್ರಿಯ ಪಿ.ಡಿ ಖಾತೆಗಳಲ್ಲಿದ್ದು, ಈ ಪೈಕಿ ರೂ.2,741.52 ಕೋಟಿ ಕಳೆದ 3 ವರ್ಷಗಳಿಂದ ಇಂತಹ ಖಾತೆಗಳಲ್ಲಿ ಉಳಿದಿರುವುದಾಗಿ ತಿಳಿಸುತ್ತಾ, ಚಾಲ್ತಿಯಲ್ಲಿಲ್ಲದಿರುವ ಪಿ.ಡಿ. ಖಾತೆಗಳನ್ನು ಮುಕ್ತಾಯ ಮಾಡದೇ ಇರುವುದರಿಂದ ಸರ್ಕಾರದ ಹಣವು ಸಂಚಿತ ನಿಧಿಯಿಂದ ಹೊರಗೆ ಉಳಿಯುವಂತಾಗಿದೆ ಎಂದು ಆಕ್ಷೇಪಿಸಿರುತ್ತಾರೆ. ಆದ್ದರಿಂದ ತಮ್ಮ ಇಲಾಖೆಯ ವ್ಯಾಪ್ತಿಯಡಿ ಬರುವ ಪ್ರತಿ ಆಡಳಿತಾಧಿಕಾರಿಗಳು ತಮ್ಮ ಹೆಸರಿನಲ್ಲಿ ಯಾವುದೇ ಪಿ.ಡಿ. ಖಾತೆಯು ನಿಷ್ಕ್ರಿಯವಾಗಿದ್ದಲ್ಲಿ ಅವುಗಳನ್ನು ಮುಕ್ತಾಯ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸುವುದು.

ಉಪಯೋಗತಾ ಪ್ರಮಾಣಪತ್ರ:-

ನಿರ್ದಿಷ್ಟ ಉದ್ದೇಶಕ್ಕಾಗಿ ನೀಡಿದ ಅನುದಾನಗಳಿಗೆ ಅನುದಾನಿತ ಸಂಸ್ಥೆಗಳಿಂದ ಉಪಯೋಗತಾ ಪ್ರಮಾಣಪತ್ರಗಳನ್ನು ಇಲಾಖಾ ಅಧಿಕಾರಿಗಳು ಪಡೆಯಬೇಕು ಹಾಗೂ ಪರಿಶೀಲಿಸಿದ ನಂತರ ಅವುಗಳನ್ನು ಮಂಜೂರಾದ ದಿನಾಂಕದಿಂದ 18 ತಿಂಗಳ ಒಳಗೆ ಮಹಾಲೇಖಪಾಲರಿಗೆ ಕಳುಹಿಸಬೇಕೆಂದು ಕರ್ನಾಟಕ ಆರ್ಥಿಕ ಸಂಹಿತೆಯ ನಿಯಮ 161(ಬಿ)(5) ರಲ್ಲಿ ತಿಳಿಸಲಾಗಿದೆ. ಆದರೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ದಿನಾಂಕ:31/03/2021 ಕ್ಕೆ ವಿವಿಧ ಇಲಾಖೆಗಳಿಂದ ರೂ.730.30 ಕೋಟಿ ಮೌಲ್ಯದ 294 ಉಪಯೋಗತಾ ಪ್ರಮಾಣಪತ್ರಗಳು ಸಲ್ಲಿಸಲು ಬಾಕಿ ಇರುವುದಾಗಿ ತಿಳಿಸುತ್ತಾ ಆಕ್ಷೇಪಿಸಿರುತ್ತಾರೆ. ಆದ್ದರಿಂದ, ತಮ್ಮ ಅಧೀನ ಸಂಸ್ಥೆಗಳಿಂದ ಬಾಕಿ ಇರುವ ಉಪಯೋಗತಾ ಪ್ರಮಾಣಪತ್ರಗಳನ್ನು ಪಡೆದು ಪರಿಶೀಲಿಸಿದ ನಂತರ ಮಹಾಲೇಖಪಾಲರಿಗೆ ಕೂಡಲೇ ಕಳುಹಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೋರಲಾಗಿದೆ.

(ಡಾ॥ ಪಿ.ಸಿ.ಜಾಫರ್,)

ಸರ್ಕಾರದ ಕಾರ್ಯದರ್ಶಿ (ಆ ಮತ್ತು ಸಂ) ಪ್ರ

ಆರ್ಥಿಕ ಇಲಾಖೆ

16/8

ಇವರಿಗೆ:-

1) ಸರ್ಕಾರದ ಎಲ್ಲಾ ಅ.ಮು.ಕಾ / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

2) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

3) ಆರ್ಥಿಕ ಇಲಾಖೆಯ ಎಲ್ಲಾ ಅಧಿಕಾರಿಗಳು.

## ಕರ್ನಾಟಕ ಸರ್ಕಾರ

ಸಂಖ್ಯೆ: ಅಗ್ರಿ 49 ಐಎಫ್‌ಎ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:23.06.2023

**ನೆನಪೋಲೆ-1**

**ಇವರಿಗೆ:**

1) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು

2) ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು/ ರಾಯಚೂರು/

**ಮಾನ್ಯರೇ,**

ವಿಷಯ: ಇಲಾಖಾ ಜಮೆ ಮತ್ತು ವೆಚ್ಚದ ಲೆಕ್ಕ ಹೊಂದಾಣಿಕೆ, ಎ.ಸಿ.ಬಿಲ್ಲುಗಳ ಮೇಲೆ ಎನ್.ಡಿ.ಸಿ ಬಿಲ್ಲುಗಳ ಸಲ್ಲಿಸುವಿಕೆ, ನಿಷ್ಕ್ರಿಯ ಪಿ.ಡಿ.ಖಾತೆಗಳ ಮುಕ್ತಾಯ ಹಾಗೂ ಉಪಯೋಗತಾ ಪ್ರಮಾಣ ಪತ್ರ ಸಲ್ಲಿಸುವಿಕೆ ಬಗ್ಗೆ.

ಉಲ್ಲೇಖ: 1)ಸರ್ಕಾರದ ಕಾರ್ಯದರ್ಶಿ(ಆಯವ್ಯಯ ಮತ್ತು ಸಂಪನ್ಮೂಲ)ಪ್ರ, ಆರ್ಥಿಕ ಇಲಾಖೆ ಇವರ ಸುತ್ತೋಲೆ ಸಂ:ಆಇ 26 ಬಿಪಿಎ 2021, ದಿನಾಂಕ:16.08.2021

2) ಇದೇ ಸಮ ಸಂಖ್ಯೆ ಪತ್ರ ದಿನಾಂಕ: 26.10.2021

Office of the Comptroller
University of Agricultural Sciences
139
6/7/23

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಸದರಿ ಸುತ್ತೋಲೆಯಲ್ಲಿ ಲೆಕ್ಕ ಹೊಂದಾಣಿಕೆ ಕಾರ್ಯವನ್ನು ಹಣಕಾಸು ವರ್ಷದ ಕೊನೆಯವರೆಗೂ ಮುಂದೂಡದೆ, ಲೆಕ್ಕಗಳು ಮುಕ್ತಾಯವಾದ ನಂತರ ಲೆಕ್ಕಗಳಲ್ಲಿನ ತಪ್ಪು ವರ್ಗೀಕರಣಗಳನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ, ಹೊಂದಾಣಿಕೆ ಕಾರ್ಯವನ್ನು ನಿಯಮಿತವಾಗಿ ಮಾಡಬೇಕೆಂದು ತಿಳಿಸಲಾಗಿದೆ. ಸವಿವರ ಸಾದಿಲ್ವಾರು ಬಿಲ್ಲುಗಳನ್ನು(ಎನ್.ಡಿ.ಸಿ) ಒಂದು ತಿಂಗಳೊಳಗಾಗಿ ಸಲ್ಲಿಸಬೇಕೆಂದು ತಿಳಿಸಲಾಗಿದೆ. ಈ ನಿಯಮಗಳನ್ನು ಪಾಲಿಸದೇ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸದೆ ಇರುವುದರಿಂದ ದಿನಾಂಕ:31.03.2021ಕ್ಕೆ ರೂ.126.34 ಕೋಟಿಗಳ 2221 ಬಿಲ್ಲುಗಳು ಇತ್ಯರ್ಥವಾಗದೆ ವಿವಿಧ ಇಲಾಖೆಗಳು ಬಾಕಿ ಉಳಿಸಿಕೊಂಡಿರುವುದಾಗಿ ಮಹಾಲೇಖಪಾಲರು ಆಕ್ಷೇಪಿಸಿರುತ್ತಾರೆ. ಬಾಕಿ ಉಳಿಸಿಕೊಂಡಿರುವ ಎ.ಸಿ.ಬಿಲ್ಲುಗಳಿಗೆ ಎನ್.ಡಿ.ಸಿ ಬಿಲ್ಲುಗಳನ್ನು ಸಲ್ಲಿಸಲು ಹಣ ಸೆಳೆಯುವ ಅಧಿಕಾರಿಗಳು ಅಗತ್ಯ ಕ್ರಮತೆಗೆದುಕೊಳ್ಳುವುದು.

ಸರ್ಕಾರದ ಅನುಮತಿ ಮೇರೆಗೆ ತೆರೆಯಲಾಗಿರುವ ಪಿ.ಡಿ. ಖಾತೆಗಳನ್ನು ಒಂದು ವೇಳೆ ಮುಂದಿನ ಸಾಲಿನಲ್ಲಿ ಮುಂದುವರೆಸಬೇಕಾದಲ್ಲಿ, ಆರ್ಥಿಕ ಇಲಾಖೆಯ ಅನುಮತಿ ಪಡೆಯಬೇಕಿರುತ್ತದೆ. ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೇಖಪಾಲರು ದಿನಾಂಕ:31.03.2021ಕ್ಕೆ ರೂ.3,989.22 ಕೋಟಿ ನಿಷ್ಕ್ರಿಯ ಪಿ.ಡಿ.ಖಾತೆಗಳಲ್ಲಿದ್ದು, ಈ ಪೈಕಿ ರೂ.2,741,52 ಕೋಟಿ ಕಳೆದ 3 ವರ್ಷಗಳಿಂದ ಇಂತಹ ಖಾತೆಗಳಲ್ಲಿ ಉಳಿದಿರುವುದಾಗಿ ತಿಳಿಸುತ್ತಾ, ಆಡಳಿತಾಧಿಕಾರಿಗಳು ತಮ್ಮ ಹೆಸರಿನಲ್ಲಿ ಯಾವುದೇ ಪಿ.ಡಿ ಖಾತೆಯು ನಿಷ್ಕ್ರಿಯವಾಗಿದ್ದಲ್ಲಿ ಅವುಗಳನ್ನು ಮುಕ್ತಾಯ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

ನಿರ್ದಿಷ್ಟ ಉದ್ದೇಶಕ್ಕಾಗಿ ನೀಡಿದ ಅನುದಾನಗಳಿಗೆ ಅನುದಾನಿತ ಸಂಸ್ಥೆಗಳಿಂದ ಉಪಯೋಗತಾ ಪ್ರಮಾಣಪತ್ರಗಳನ್ನು ಇಲಾಖಾ ಅಧಿಕಾರಿಗಳು ಪಡೆಯಬೇಕು ಹಾಗೂ ಪರಿಶೀಲಿಸಿದ ನಂತರ ಅವುಗಳನ್ನು

No 3998
23/07/2023

..2

ಮಂಜೂರಾದ ದಿನಾಂಕದಿಂದ 18 ತಿಂಗಳ ಒಳಗೆ ಮಹಾಲೇಖಪಾಲರಿಗೆ ಕಳುಹಿಸಬೇಕೆಂದು ಕರ್ನಾಟಕ ಆರ್ಥಿಕ ಸಂಹಿತೆಯ ನಿಯಮ 161(ಬಿ) (5)ರಲ್ಲಿ ತಿಳಿಸಲಾಗಿದೆ. ಬಾಕಿ ಇರುವ ಉಪಯೋಗತಾ ಪ್ರಮಾಣಪತ್ರಗಳನ್ನು ಪಡೆದು ಪರಿಶೀಲಿಸಿದ ನಂತರ ಮಹಾಲೇಖಪಾಲರಿಗೆ ಕೂಡಲೇ ಕಳುಹಿಸುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಕೈಗೊಂಡ ಕ್ರಮವನ್ನು ಈ ವಿಭಾಗಕ್ಕೆ ಮಾಹಿತಿಸುವಂತೆ ಮತ್ತೊಮ್ಮೆ ಕೋರಿದೆ.

ತಮ್ಮ ನಂಬುಗೆಯ,

23/6/2023

(ಆರ್.ರಾಮಕೃಷ್ಣ)

ಆಂತರಿಕ ಆರ್ಥಿಕ ಸಲಹೆಗಾರರು ಮತ್ತು

ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಕೃಷಿ, ತೋಟಗಾರಿಕೆ, ರೇಷ್ಮೆ ಮತ್ತು ಪಸಂಮೀ ಇಲಾಖೆ

23/06/23

3/7/23

5.7.2023

C

4/7.

DC-S III

DC. (Audit)

DC S IV

3/7

6/7

6/7

ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 24 ಟಿಎಆರ್ 2023

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:04.07.2023

## ಸುತ್ತೋಲೆ

**ವಿಷಯ:-** ಇಲಾಖಾ ಜಮೆ ಮತ್ತು ವೆಚ್ಚಗಳ ಕುರಿತು ಮಹಾಲೇಖಪಾಲರ ಲೆಕ್ಕಗಳೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ.

*******

ಮಹಾಲೇಖಪಾಲರು ಅರೆ ಸರ್ಕಾರಿ ಪತ್ರ ದಿನಾಂಕ:19.04.2023ರಲ್ಲಿ ಬಾಕಿ ಇರುವ ಎ.ಸಿ.ಬಿಲ್ಲುಗಳಿಗೆ NDC ಬಿಲ್ಲುಗಳನ್ನು ಕೂಡಲೇ ಸಲ್ಲಿಸಲು, ಸಹಾಯಾನುದಾನಕ್ಕೆ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸುವಂತೆ ಹಾಗೂ ಕಾಲಕಾಲಕ್ಕೆ ಲೆಕ್ಕಹೊಂದಾಣಿಕೆ ಮಾಡುವಂತೆ ಸೂಚಿಸಿರುತ್ತಾರೆ.

**ಎ.ಸಿ. ಬಿಲ್ಲುಗಳ ಮೇಲೆ ಸೆಳೆದಿರುವುದಕ್ಕೆ NDC ಬಿಲ್ಲು ಸಲ್ಲಿಸದಿರುವುದು:**

ಮಹಾಲೇಖಪಾಲರು ಅರೆ ಸರ್ಕಾರಿ ಪತ್ರ ದಿನಾಂಕ: 19.04.2023ರಲ್ಲಿ, ಜನವರಿ-2023ರ ಅಂತ್ಯಕ್ಕೆ ಒಳಾಡಳಿತ ಇಲಾಖೆಯ ರೂ.33.13 ಕೋಟಿಗಳ 405 NDC ಬಿಲ್ಲುಗಳು, ಸಿ.ಆ.ಸು.ಇಲಾಖೆಯ (ಚುನಾವಣೆಗಳು) ರೂ.30.22 ಕೋಟಿಗಳ 184 NDC ಬಿಲ್ಲುಗಳು ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ ರೂ.6.27 ಕೋಟಿಗಳ 78 NDC ಬಿಲ್ಲುಗಳು ಒಟ್ಟು ರೂ.79.24ಕೋಟಿಗಳ 1559 ಎ.ಸಿ. ಬಿಲ್ಲುಗಳು ಬಾಕಿ ಇರುವುದಾಗಿ ಆಕ್ಷೇಪಿಸಿರುತ್ತಾರೆ.

ಬಾಕಿ ಇರುವ ಎ.ಸಿ.ಬಿಲ್ಲುಗಳ ವಿವರಗಳನ್ನು ಮಹಾಲೇಖಪಾಲರಿಂದ ಪಡೆದು ಸಂಬಂಧಪಟ್ಟ ಇಲಾಖೆಗಳು ಒಂದು ತಿಂಗಳೊಳಗಾಗಿ ಇವುಗಳನ್ನು ಇತ್ಯರ್ಥಗೊಳಿಸುವಂತೆ ತಿಳಿಸಿದೆ.

**ಸಹಾಯಾನುದಾನ ಪಡೆದ ಬಗ್ಗೆ UC ಸಲ್ಲಿಸದಿರುವುದು:**

ಜನವರಿ-2023ರ ಅಂತ್ಯಕ್ಕೆ ವೈದ್ಯಕೀಯ ಇಲಾಖೆಯ ರೂ.166.24 ಕೋಟಿಗಳ 56 ಬಿಲ್ಲುಗಳು ಮತ್ತು ಕ್ರೀಡೆ ಮತ್ತು ಯುವಸೇವೆ ಇಲಾಖೆಯ ರೂ.29.69 ಕೋಟಿಗಳ 34 ಬಿಲ್ಲುಗಳು ಒಟ್ಟು ರೂ.195.93ಕೋಟಿಗಳ 90 ಸಹಾಯಾನುದಾನ ಬಿಲ್ಲುಗಳಿಗೆ ಹಣಬಳಕೆ ಪ್ರಮಾಣ ಪತ್ರ ಒದಗಿಸುವುದು ಬಾಕಿ ಇರುವುದಾಗಿ ಆಕ್ಷೇಪಿಸಿರುತ್ತಾರೆ.

ಆದ್ದರಿಂದ ತಮ್ಮ ಇಲಾಖೆಗಳಿಗೆ ಸಂಬಂಧಪಟ್ಟಂತೆ ಹಣ ಸೆಳೆಯುವ ಅಧಿಕಾರಿಗಳಿಗೆ ಸಹಾಯಾನುದಾನವನ್ನು ಉಪಯೋಗಿಸಿರುವ ಬಗ್ಗೆ ಹಣ ಬಳಕೆ ಪ್ರಮಾಣ ಪತ್ರವನ್ನು ಕೂಡಲೆ ಖಜಾನೆ ಹಾಗೂ ಮಹಾಲೇಖಪಾಲರಿಗೆ ಸಲ್ಲಿಸುವಂತೆ ಸೂಚನೆ ನೀಡುವಂತೆ ತಿಳಿಸಿದೆ.

ಲೆಕ್ಕ ಹೊಂದಾಣಿಕೆ:

ಜನವರಿ-2023ರ ಅಂತ್ಯಕ್ಕೆ 82.57%ರಷ್ಟು ಜಮೆಗಳು (Receipts) ಮತ್ತು 70.80%ರಷ್ಟು ಮಾತ್ರ ವೆಚ್ಚಗಳ (Expenditure) ಲೆಕ್ಕಹೊಂದಾಣಿಕೆ ಮಾಡಿರುವುದಾಗಿ, ಹಾಗೂ ಜಮೆ ಮತ್ತು ವೆಚ್ಚಗಳ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳದ CCO ಗಳ ಪಟ್ಟಿಯನ್ನು ಅನುಬಂಧ-1 ರಲ್ಲಿ ಮಹಾಲೇಖಪಾಲರ ದಿನಾಂಕ:19.04.2023ರ ಪತ್ರದಲ್ಲಿ ಸರ್ಕಾರದ ಗಮನಕ್ಕೆ ತಂದಿರುತ್ತಾರೆ. (ಲಗತ್ತಿಸಿದೆ)

ಆದ್ದರಿಂದ ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ 01 ಟಿಎಫ್‌ಸಿ 2021, ದಿನಾಂಕ: 29.10.2021ರಲ್ಲಿ ತಿಳಿಸಿರುವಂತೆ ಸಂಬಂಧಪಟ್ಟ CO/CCO/DDO ಗಳು ಲೆಕ್ಕ ಹೊಂದಾಣಿಕೆ ಮಾಡುವಂತೆ ಎಲ್ಲಾ ಇಲಾಖೆಗಳಿಗೆ ನಿರ್ದೇಶನ/ಸೂಚನೆಗಳನ್ನು ತಪ್ಪದೇ ನೀಡುವುದು.

ಮೇಲೆ ತಿಳಿಸಿದಂತೆ, ತಮ್ಮ ವ್ಯಾಪ್ತಿಯಡಿ ಬರುವ ಮುಖ್ಯ ನಿಯಂತ್ರಣಾಧಿಕಾರಿಗಳಿಗೆ/ ನಿಯಂತ್ರಣಾಧಿಕಾರಿಗಳಿಗೆ ಬಾಕಿ ಎ.ಸಿ.ಬಿಲ್ಲುಗಳಿಗೆ NDC ಬಿಲ್ಲುಗಳನ್ನು ಸಲ್ಲಿಸುವಂತೆ, ಸಹಾಯಾನುದಾನಕ್ಕೆ ಹಣಬಳಕೆ ಪ್ರಮಾಣ ಪತ್ರ ಸಲ್ಲಿಸುವಂತೆ ಹಾಗೂ ನಿಯಮಿತವಾಗಿ ಲೆಕ್ಕ ಹೊಂದಾಣಿಕೆ ಮಾಡುವಂತೆ ಸೂಚನೆ ನೀಡಲು ಕೋರಲಾಗಿದೆ. ಇಲಾಖೆಗಳ ಆಂತರಿಕ ಆರ್ಥಿಕ ಸಲಹೆಗಾರರು ತಮ್ಮ ವ್ಯಾಪ್ತಿಯ ಇಲಾಖೆಗಳಿಂದ ಈ ಬಗ್ಗೆ ಕ್ರಮ ಕೈಗೊಂಡಿರುವ ಕುರಿತು ಕ್ರೋಢೀಕೃತ ವರದಿ ಪಡೆದು ಆರ್ಥಿಕ ಇಲಾಖೆಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಆದಾಗ್ಯೂ ಮತ್ತದೇ ನ್ಯೂನ್ಯತೆಗಳು ಮರುಕಳಿಸಿದರೆ ಸಂಬಂಧಪಟ್ಟ ಆಡಳಿತ ಇಲಾಖೆಗಳೇ ಜವಾಬ್ದಾರರಾಗುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

(ನಿತೀಶ್.ಕೆ.)
ಸರ್ಕಾರದ ಉಪ ಕಾರ್ಯದರ್ಶಿ (ಆ&ಸಂ)
ಆರ್ಥಿಕ ಇಲಾಖೆ

ಇವರಿಗೆ:

1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
2) ಎಲ್ಲಾ ಇಲಾಖಾ ಮುಖ್ಯಸ್ಥರು/ನಿಯಂತ್ರಣಾಧಿಕಾರಿಗಳು
3) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು

ಪ್ರತಿ ಮಾಹಿತಿಗಾಗಿ

1) ಪ್ರಧಾನ ಮಹಾಲೇಖಪಾಲರು (ಎ&ಇ) ಮತ್ತು (ಆಡಿಟ್), ಕರ್ನಾಟಕ ಬೆಂಗಳೂರು.
2) ಆರ್ಥಿಕ ಇಲಾಖೆಯ ಎಲ್ಲಾ ವಿಶೇಷ/ಅಪರ/ಜಂಟಿ/ಉಪ/ಅಧೀನ ಕಾರ್ಯದರ್ಶಿಗಳು ಮತ್ತು ಶಾಖಾಧಿಕಾರಿಗಳು.